# ಆಹಾ ಸುದ್ದಿ!

★ ಸಸಿತೋಟ



ಲಂಡನ್ನಿನಲ್ಲಿ ಪೋಲ್ ಡಾನ್ಸ್ ಕ್ಲಬ್ ಭಾರಿ ಜನಪ್ರಿಯವಂತೆ. ಲಲನೆಯರು ಕಂಬ ಸುತ್ತುತ್ತ, ಏರುತ್ತ ನರ್ತಿಸಿದರೆ, ಮದಿರೆಯ ನಶೆ ತಲೆಗೇರಿದಂತೆ ಎಂದು ಗ್ರಾಹಕರು ಮುಗಿ ಬೀಳುತ್ತಾರಂತೆ. ಆದರೆ ಅಲ್ಲೊಂದು ಕ್ಲಬ್ ಈಗ ರೋಬಾಟ್‌ಗಳನ್ನು ಕಂಬ ಸುತ್ತುವ ಕೆಲಸಕ್ಕೆ ನೇಮಿಸಿಕೊಂಡಿದೆಯಂತೆ. ರೋಬಾಟ್ ಗಂಡೋ, ಹೆಣ್ಣೋ ಎಂದೂ ತಿಳಿಯದೆ ಗ್ರಾಹಕರು ಗೊಂದಲಕ್ಕೆ ಒಳಗಾಗಿದ್ದು, ಸದ್ಯ ಕ್ಲಬ್ ಗಲ್ಲಾಪೆಟ್ಟಿಗೆ ಖಾಲಿ ಬಿದ್ದು ಮಾಲೀಕರ ತಲೆಗೇರಿದ ಹಣದ ಮತ್ತು ಕೆಳಗಿಳಿಯದಿದ್ದರೆ ಸಾಕು.



ಟೋಕಿಯೋದಲ್ಲಿ ಪುರುಷರು ಈ ಕಸರತ್ತು ನಡೆಸಿದ್ದು ನಂತರ ನಡೆಯುವ ಅಮೂಲ್ಯ ಕೆಲಸಕ್ಕಾಗಿ. ಹೊಸ ವರ್ಷದಲ್ಲಿ ಅದೃಷ್ಟ ಖುಲಾಯಿಸಲಿ ಎಂದು ತಣ್ಣಗೆ ಕೊರೆಯುವ ನೀರನ್ನು ಮೈಮೇಲೆ ಸುರಿದುಕೊಳ್ಳುವ ಸಂಪ್ರದಾಯ ಅಲ್ಲಿದೆಯಂತೆ. ಆ ಚಳಿ ತಡೆದುಕೊಳ್ಳಲು ಮೊದಲೇ ಬೆವರು ಸುರಿಸಿದರಾಯ್ತಲ್ಲ. ಅಷ್ಟೂ ಕಷ್ಟಪಡದಿದ್ದರೆ ಅದೃಷ್ಟ ಲಕ್ಷ್ಮಿ ಒಲಿಯುತ್ತಾಳೆಯೇ!

ಪತ್ರಿಕೆಯಲ್ಲಿ ಜಾಹೀರಾತಿನ ಜೊತೆ ಕೆಲವು ಬಾರಿ ಉತ್ಪನ್ನಗಳನ್ನು ಅಂಟಿಸುವುದು, ವಿವಿಧ ಉಡುಗೊರೆ ನೀಡುವುದು ಸಾಮಾನ್ಯ. ಆದರೆ ಸ್ವೀಡನ್ನಿನ ಮಹಿಳಾ ನಿಯತಕಾಲಿಕವೊಂದು ಜಾಹೀರಾತಿನ ಮೇಲೆ ಮೂತ್ರ ಮಾಡಿ, ಅದೃಷ್ಟವಿದ್ದರೆ ಬಹುಮಾನ ಗೆಲ್ಲಿ ಎಂದು ಪ್ರಕಟಿಸಿದೆಯಂತೆ. ಅದು ಗರ್ಭ ನಿಂತಿರುವುದನ್ನು ಪತ್ತೆ ಹಚ್ಚುವ ಸ್ಟ್ರಿಪ್ ಆಗಿದ್ದು, ಪಾಸಿಟಿವ್ ಬಂದರೆ ತೊಟ್ಟಿಲನ್ನು ಅರ್ಧ ಬೆಲೆಗೆ ನೀಡಲಾಗುವುದಂತೆ. ಪಾಸಿಟಿವ್ ಫಲಿತಾಂಶ ಬಂದಿದ್ದನ್ನು ಸಾಬೀತುಪಡಿಸಲು ಮೂತ್ರದಲ್ಲಿ ನೆಂದ ಪತ್ರಿಕೆಯನ್ನು ಕಚೇರಿಗೆ ತರಬೇಕೇ ಬೇಡವೇ ಎಂಬುದನ್ನು ಪತ್ರಿಕೆ ಪ್ರಕಟಿಸಿಲ್ಲವಂತೆ.

ಅಮೆರಿಕದ ಅರಿಝೋನಾದಲ್ಲಿ ಮಹಿಳೆಯೊಬ್ಬಳು ತನ್ನ ಪತಿ ಶೌಚಾಲಯದಲ್ಲಿ ಕೂತಿದ್ದಾಗ ಆತನೆಡೆ ಎರಡು ಬಾರಿ ಗುಂಡು ಹಾರಿಸಿದಳಂತೆ. ಸದ್ಯ ಅವು ಗೋಡೆಗೆ ಬಡಿದು ಆಕೆಯನ್ನು ಬಂಧಿಸಲಾಗಿದೆಯಂತೆ. ಪತಿ ತನ್ನ ಮಾತನ್ನು ಕೇಳುವಂತೆ ಮಾಡಲು ಈ ಕ್ರಮ ಎಂದು ಆಕೆ ಸಮರ್ಥಿಸಿಕೊಂಡಿದ್ದಾಳಂತೆ. ಮದುವೆಯಾಗಿ ಮೂರು ದಶಕಗಳ ನಂತರ ತನ್ನ ಮಾತನ್ನು ಪತಿಗೆ ಕೇಳಿಸುವ ಹಟ ಆಕೆಗ್ಯಾಕೆ ಬಂತೋ!



ಟಾಯ್ಲೆಟ್ ಇರುವುದು ಯಾಕೆ ಎಂಬ ಅಸಂಬದ್ಧ ಪ್ರಶ್ನೆ ಈ ಚಿತ್ರ ನೋಡಿದಾಗ ಎದುರಾಗಬಹುದಲ್ಲವೇ? ಮಾಡಬೇಕಾದ ಕೆಲಸ ಮುಗಿಸಿ ಬರುವುದು ಬಿಟ್ಟು ಇನ್ನೇನೊ ಮಾಡಿ ಬಂದರೆ..! ಚಿತ್ರದ ಜೊತೆ ಟಾಯ್ಲಟ್ ಟ್ವಿಟರ್‌ನಲ್ಲಿ ಜಾಗ ಪಡೆಯುತ್ತದೆ ಎಂಬುದಕ್ಕೇ ಇರಬಹುದು ಮಾಡಬಾರದ ಜಾಗದಲ್ಲಿ ಮುದ್ರೆಯೊತ್ತಿದ್ದು.



ಅಮೆರಿಕದ ಬಾಸ್ಟನ್ ಲಲಿತ ಕಲಾ ಸಂಗ್ರಹಾಲಯದಲ್ಲಿ ಮೂರು ತಿಂಗಳಿನ ಈ ನಾಯಿಮರಿ ರೈಲಿ ಉದ್ಯೋಗ ಗಿಟ್ಟಿಸಿಕೊಂಡು ಡ್ಯೂಟಿಗೆ ಹಾಜರಾಗಿದೆಯಂತೆ. ಕೆಲಸ ಕಲಾಕೃತಿಯನ್ನು ಹಾಳು ಮಾಡಬಹುದಾದ ಕೀಟಗಳನ್ನು ಹುಡುಕುವುದು. ಇದಕ್ಕಾಗಿ ರೈಲಿಗೆ ತರಬೇತಿಯೂ ಸಿಗಲಿದೆ. ಹುಡುಕಿದ ನಂತರ ಏನು ಮಾಡಬೇಕು ಎಂಬುದನ್ನು ಸ್ವತಃ ಕಲಿಯುವಷ್ಟು ಅದು ಶಾಣ್ಯಾ ಇದೆಯಂತೆ.